ಪ್ರಜೆಗಳು' ಎನ್ನುವಂತೆ 'ಇಂದಿನ ಕಂಬಳಿಹುಳುಗಳೇ ನಾಳೆಯ ಚಿಟ್ಟೆಗಳು' ಎಂದು ಯೋಚಿಸುತ್ತಾ, ಆ ಬಣ್ಣಬಣ್ಣದ ಚಿಟ್ಟೆಗಳ ಅಂದಚೆಂದ, ಅವು ಹಾರಾಡುತ್ತಾ ಹೂಗಳ ಮಕರಂದ ಹೀರುವ ರೀತಿ ಇವನ್ನೆಲ್ಲಾ ನೆನೆಸಿಕೊಂಡರೆ ಕಂಬಳಿಹುಳುಗಳನ್ನು ಸಾಯಿಸಲು ಮನಸ್ಸು ಬರುತ್ತಿರಲಿಲ್ಲ. ಆದರೆ, ಕಂಬಳಿಹುಳುಗಳ ಕಾಟ ಪಕ್ಕದ ಮನೆಯವರೆಗೂ ವಿಸ್ತರಿಸಿತು. ಇದರಿಂದ ಪ್ರತಿನಿತ್ಯ ಆ ಮರಕ್ಕೆ ಅವರ ಬೈಗುಳಗಳು ದೊರೆಯುತ್ತಿತ್ತು. ಅವರು ಆ ಮರಕ್ಕೆ ಬೈಯುವಾಗ ನಾನು ಮಾತಾಡದೆ ಒಮ್ಮೆ ಅವರ ಮುಖವನ್ನೂ, ಇನ್ನೊಮ್ಮೆ ಮರವನ್ನೂ ನೋಡುತ್ತಿದ್ದೆ. ಆಗ ಆ ಮರ ಇವರ ಬೈಗುಳವನ್ನು 'ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ' ಕೇಳಿಸಿಕೊಳ್ಳುತ್ತಾ, ಒಳಗೊಳಗೇ ಹುಸಿನಗು ನಗುತ್ತಿರಬಹುದೇ ಎಂದೆನಿಸುತ್ತಿತ್ತು. ಆ ಮರವನ್ನು ನೆಪವಾಗಿಸಿಕೊಂಡು ಇಂತಹ ಮರವನ್ನು ಬೆಳೆಯುವುದಕ್ಕೆ ಬಿಟ್ಟಿದ್ದೀರಲ್ಲಾ ಎಂದು ಪರೋಕ್ಷವಾಗಿ ನನ್ನನ್ನೇ ಬೈಯುತ್ತಿದ್ದಾರೇನೋ ಎಂದೂ ಅನಿಸಿತು. 'ಎಮ್ಮೆ ಮೇಲೆ ಮಳೆ ಹೊಯ್ದಂತೆ' ಆ ಮರ ಯಾವುದಕ್ಕೂ 'ಜಪ್ಪಯ್ಯ' ಎನ್ನದೆ ತನ್ನ ಪಾಡಿಗೆ ತಾನು ಬೆಳೆಯುತ್ತಲೇ ಇತ್ತು.

ಮಗ ಸೀನಿನಿಂದ ಪಡುವ ತೊಂದರೆ, ಕಂಬಳಿಹುಳುಗಳ ಕಾಟ, ಕಸದ ವಾಸನೆ ಇವೆಲ್ಲದರಿಂದ ತಲೆ ಕೆಟ್ಟುಹೋಯಿತು. ಆ ಮರದ ಕೊಂಬೆಗಳನ್ನು ಪುನಃ ಕಡಿಸಬೇಕೆಂದು ತೀರ್ಮಾನಿಸಿ, ಸಂಬಂಧಿಸಿದ ಇಲಾಖೆಯವರಿಗೆ ಅದರಿಂದ ಆಗುತ್ತಿದ್ದ ತೊಂದರೆಗಳನ್ನೆಲ್ಲಾ ವಿವರಿಸುವ ಅರ್ಜಿಯೊಂದನ್ನು ನೀಡಿ, ಆದಷ್ಟು ಬೇಗ ಕೊಂಬೆಗಳನ್ನು ಕಡಿಸಿಕೊಡಬೇಕೆಂದು ವಿನಂತಿಸಿದೆವು. ಚುನಾವಣೆ ಹತ್ತಿರ ಬಂದಿರುವುದರಿಂದ ಇನ್ನೂ ಎರಡು ಮೂರು ತಿಂಗಳು ಆಗುವುದಿಲ್ಲ ಎಂಬ ಉತ್ತರ ಬಂದಿತು. ಚುನಾವಣೆಗೂ, ಮರದ ಕೊಂಬೆ ಕಡಿಯುವುದಕ್ಕೂ ಏನು ಸಂಬಂಧ ಎಂದು ತಲೆ ಕೆರೆದುಕೊಂಡರೂ ಅರ್ಥವಾಗಲಿಲ್ಲ. ನಮ್ಮ ಮನೆಯ ಹತ್ತಿರ ವೋಟು ಕೇಳಲು ಬಂದರೆ ಅವರಿಗೆ ಈ ಮರದ ಕೊಂಬೆಗಳನ್ನು ಕಡಿಸಿಕೊಟ್ಟರೆ ನಿಮಗೇ ವೋಟು ಹಾಕುತ್ತೇವೆ ಎಂದು ಹೇಳಬೇಕೆನಿಸಿತು. ಆದರೆ, ಯಾರೂ ನಮ್ಮ ರಸ್ತೆಯ ಕಡೆ ಸುಳಿಯಲಿಲ್ಲ.

ಅಂತೂ ಚುನಾವಣೆ ಮುಗಿದು ವಾರದ ನಂತರ ಇಲಾಖೆಯ ವಾಹನ ಬಂದಿತು. ಮನೆಯಲ್ಲಿ ನಾನೊಬ್ಬಳೇ ಇದ್ದೆ. ಏಳು ಜನ ಹಗ್ಗ, ಕತ್ತಿ ಹಿಡಿದು ಜೀಪಿನಿಂದ ದಬದಬನೆ ಕೆಳಗಿಳಿದರು. 'ನೀವೇ ತಾನೇ ಈ ಮರದ ಕೊಂಬೆ ಕಡಿಯಲು ಅರ್ಜಿ ಕೊಟ್ಟಿದ್ದು' ಎಂದರು. ಹೌದೆಂದೆ. ಒಬ್ಬ ಮರದ ಕೊಂಬೆಗೆ ಹಗ್ಗ ಸುತ್ತಿ ಹಿಡಿದರೆ, ಇನ್ನಿಬ್ಬರು ಕತ್ತಿಯಿಂದ ಕಡಿಯಲಾರಂಭಿಸಿದರು. ಮತ್ತೊಬ್ಬ ಅವರಿಗೆ ನಿರ್ದೇಶನ ಕೊಡಲಾರಂಭಿಸಿದ. ಉಳಿದ ಮೂವರು ಸುಮ್ಮನೆ ಕೆಳಗೆ ನಿಂತು ನೋಡಲಾರಂಭಿಸಿದರು. ಸುಮಾರು ಅರ್ಧ ಗಂಟೆ ಕೊಂಬೆ ಕತ್ತರಿಸುವ ಕಾರ್ಯ ನಡೆಯಿತು.

ಕೆಲಸ ಆಯಿತೆಂದು ಎಲ್ಲರೂ ಹೊರಡಲಾರಂಭಿಸಿದರು. ನಿರ್ದೇಶನ ನೀಡುತ್ತಿದ್ದವನು, 'ಇಷ್ಟು ಕಷ್ಟ ಪಟ್ಟಿದ್ದೀವಿ. ಏನಾದರೂ ಕೊಡಿ' ಎಂದು ಹಲ್ಕಿರಿದ. ದುಡ್ಡು ತೆಗೆದುಕೊಳ್ಳದೆ ಅವರು ಅಲ್ಲಿಂದ ಕದಲುವ ಹಾಗೆ ಕಾಣಲಿಲ್ಲ. ತಲಾ ಒಬ್ಬರಿಗೆ ನೂರು ರೂಪಾಯಿಗಳಂತೆ ಏಳುನೂರು ರೂಪಾಯಿಗಳನ್ನು ನನ್ನಿಂದ ತೆಗೆದುಕೊಂಡ. ನಾನೂ ಬೆಪ್ಪಾಗಿ, ಮಾತಾಡಲು ತೋಚದೆ, ಬಿರುಬಿಸಿಲಲ್ಲಿ ಕೆಲಸ ಮಾಡಿದ್ದಾರಲ್ಲಾ ಎಂದೆನಿಸಿ ದುಡ್ಡು ಕೊಟ್ಟುಬಿಟ್ಟೆ. ಕೆಲಸ ಮಾಡಿದ್ದು ಮೂರು ಜನ, ದುಡ್ಡು ಮಾತ್ರ ಏಳು ಜನಕ್ಕೆ! ಕೆಳಗೆ ಬಿದ್ದ ಮರದ ರೆಂಬೆಗಳು, ಮನೆಯ ಮುಂದೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಕಸ ಇವೆಲ್ಲವನ್ನೂ ಸ್ವಚ್ಛ ಮಾಡುವ ಕೆಲಸ ನಮಗೆ ಬಿಟ್ಟು ಅವರೆಲ್ಲರೂ ಹೊರಟುಹೋದರು. ಕತ್ತೆತ್ತಿ ಮರವನ್ನೊಮ್ಮೆ ನೋಡಿದೆ. ಉದ್ದ ತಲೆಗೂದಲು ಬಿಟ್ಟವನು ನೀಟಾಗಿ ಟ್ರಿಮ್ ಮಾಡಿಸಿಕೊಂಡು ಬಂದಂತೆ ಕಾಣುತ್ತಿತ್ತು. ಅಲರ್ಜಿ, ಕಂಬಳಿಹುಳ, ಕಸ ಇವೆಲ್ಲವೂ ತೊಲಗಿಹೋಯಿತೆಂದೆನಿಸಿ ಮನಸ್ಸು ಸ್ವಲ್ಪ ನಿರಾಳವಾಯಿತು.